ಶ್ರೀ ಎಂ. ಎಸ್. ಕೃಷ್ಣನ್.—ಎಷ್ಟು ದಿವಸದಿಂದ ಈ ವಿಚಾರ ಪರಿಶೀಲನೆಯಲ್ಲಿದೆ ? ಜಾಗ್ರತೆ ಬೇಕಾದ ಕಾರ್ಯಕ್ರಮ ತೆಗೆದುಕೊಂಡು ಪ್ರವಾಹದಿಂದ ತೊಂದರೆಯಾಗದಂತೆ ವ್ಯವಸ್ಥೆ ಮಾಡುವಿರಾ ?

ಶ್ರೀ ಎಚ್. ಎನ್. ನಂಜೇಗೌಡ.—1959 ಮತ್ತು 1961ರಲ್ಲಿ ಜಾಸ್ತಿ ಪ್ರವಾಹ ಬಂತು. 1961 ರಿಂದ ಈ ವಿಚಾರದಲ್ಲಿ ಆಲೋಚನೆ ಮಾಡಲು ಪ್ರಾರಂಭಿಸಿದ್ದೇವೆ. 1961ರಲ್ಲಿ ಇದಕ್ಕಾಗಿ ಒಂದು ಕೋಟಿ 76 ಲಕ್ಷ ರೂಪಾಯಿಗಳ ಅಂದಾಜಾಗಿದೆ. ಈಗ ಫಿಗೇಷನ್ನಿಗೆ ಎಷ್ಟು ಸಾಧ್ಯವಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಜೊತೆಗೆ ಶರಾವತಿ ನದಿಗೆ ವರದಾ ನದಿಯ ನೀರನ್ನು ನೇರಿಸುವ ವಿಚಾರವೂ ಕೂಡ ಆಲೋಚನೆಯಲ್ಲಿತ್ತು. ಆದರೆ ಇದು ದುಬಾರಿ ವೆಚ್ಚದ್ದಾದುದರಿಂದ ಇದನ್ನು ಕೈಬಿಡಲಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಪ್ರವಾಹ ಬಂದು ಅನೇಕ ಸಾರಿ ತೊಂದರೆಯಾಗಿದೆ. ಅದರಿಂದ ಎಷ್ಟು ನಷ್ಟವಾಗಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಎಫ್. ಎಸ್. ತಾವರೆ.—1961ರಲ್ಲಿ ವರದಾ ನದಿಯ ಮಹಾಪೂರ ಬಂದು 17 ಹಳ್ಳಿಗಳಿಗೆ ತೊಂದರೆಯಾಗಿದೆ. ಇದರಿಂದ ಎಷ್ಟು ಕುಟುಂಬಗಳವರು ಬೀದಿಪಾಲಾಗಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—61ರಲ್ಲಿ ಮಹಾಪೂರ ಬಂತು. ಯಾವ ಕುಟುಂಬಗಳವರು ಬೀದಿ ಪಾಲಾಗಿದ್ದಾರೆ ಎಂಬ ವಿವರ ನನ್ನಲ್ಲಿಲ್ಲ. ವಿವರ ಕೊಟ್ಟರೆ ಸರಕಾರ ಸೂಕ್ತ ಕ್ರಮ ಕೈಗೊಳ್ಳುವುದು.

ಶ್ರೀ ತಾಗೋಡು ತಿಮ್ಮಪ್ಪ.—ಸಾವಿರಾರು ಜನರು ಪ್ರವಾಹದ ಹಾವಳಿಯಿಂದ ಪ್ರತಿ ವರ್ಷ ತೊಂದರೆಗೊಡಾಗುತ್ತಿರುವುದರಿಂದ ಜಾಗ್ರತೆ ಸೂಕ್ತ ಕ್ರಮ ಕೈಗೊಂಡು ಈ ತೊಂದರೆ ತಪ್ಪಿಸುವಿರಾ ?

ಶ್ರೀ ಎಚ್. ಎನ್. ನಂಜೇಗೌಡ.—ಬೇಗ ಪರಿಹಾರ ಮಾಡಬೇಕೆಂಬ ಉದ್ದೇಶ ಸರಕಾರಕ್ಕಿದೆ. ಕೇಂದ್ರ ಸರಕಾರದಿಂದ ಪ್ರವಾಹ ನಿಯಂತ್ರಣ ವಗ್ಯೆರೆಗೆ ಸಹಾಯ ಬರುವುದು. ಅದನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕೆಂಬುದನ್ನು ಯೋಚಿಸಿ ಕೇಂದ್ರದಿಂದ ಹಣ ಸಹಾಯ ಪಡೆದು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಉದ್ದೇಶವಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ವರದಾ ನದಿ ಮತ್ತು ಮಲೆನಾಡಿನಲ್ಲಿರುವ ಇತರ ಕೆಲವು ನದಿಗಳ ಪ್ರವಾಹ ಪ್ರತಿವರ್ಷ ಬಂದು ತೊಂದರೆಯಾಗುತ್ತಿದೆ. ಇದಕ್ಕೆ ಶಾಶ್ವತವಾದ ಪರಿಹಾರ ದೊರೆಯುವಂತೆ ಒಂದು ಯೋಜನೆ ಮಾಡುವಿರಾ ?

Sri H. N. NANJE GOWDA.—It is a suggestion for Consideration.

K. C. T. Mills Limited, Hubli

290. Sri B. G. BANAKAR (Hirekerur).—

Will the Minister for Co-operation be pleased to state :—

(*a*) whether the Board of Management of the Karnatak Co-operative Textile Mills Ltd., Hubli had closed the Mill and paid the compensation to the employees before the Mill was leased out to Sri G. Mahadevappa ;

(*b*) whether Sri G. Mahadevappa has paid all the lease amount according to the agreement ;

(*c*) if not, whether the Government intends to take back the Mill in view of the breach of condition as stipulated in the agreement and take steps to liquidate the Mill ?

Sri A. SHANKARA ALVA (Minister for Co-operation).—

(*a*) Yes.

(*b*) M/s. G. Mahadevappa and Sons have paid the lease rent due for the first year and the advance lease amount due to be paid on the first anniversary of the lease has not been paid yet.

(*c*) As the points of dispute raised by the lessees are still under consideration, the question of Government taking back the mill and taking steps for liquidating it, does not arise at this stage.

ಶ್ರೀ ಬಿ. ಜಿ. ಬಣಕಾರ್.—ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಯಲ್ಲಿ ಸರಕಾರ ಮತ್ತು ಸಹಕಾರ ಸಂಘದವರು ಹಾಕಿರುವ ಷೇರು ಬಂಡವಾಳ ಮತ್ತು ಸಾಲ ಎಷ್ಟು ? ಇದಕ್ಕೆ ಗ್ಯಾರಂಟಿ ಎಷ್ಟು ಕೊಡಲಾಗಿದೆ ?

ಶ್ರೀ ಎ. ಶಂಕರ ಆಳ್ವ.—ಷೇರ್ ಕ್ಯಾಪಿಟಲ್ 15 ಲಕ್ಷದ 33 ಸಾವಿರ ರೂಪಾಯಿ, ಸರಕಾರಿ ಷೇರು 40 ಲಕ್ಷ ರೂಪಾಯಿ, ಸಾಲ ಈಗಿನವರೆಗೆ 79 ಲಕ್ಷ 4 ಸಾವಿರ ರೂಪಾಯಿ ಬಾಕಿ ಇದೆ. ಗ್ಯಾರಂಟಿ ಕೊಟ್ಟಿರುವುದು 25.56 ಲಕ್ಷ ರೂಪಾಯಿ-ಇದು ಬಾಕಿ ಇದೆ.

ಶ್ರೀ ಬಿ. ಜಿ. ಬಣಕಾರ್.—ಶ್ರೀ ಜಿ. ಮಹದೇವಪ್ಪನವರಿಗೆ ಪ್ರತಿ ವರ್ಷ ಬಾಡಿಗೆ ರೂಪದಲ್ಲಿ ಎಷ್ಟು ವರ್ಷಕ್ಕೆ ಕೊಡಲಾಗಿದೆ ?

ಶ್ರೀ ಎ. ಶಂಕರ ಆಳ್ವ.—20 ವರ್ಷಕ್ಕೆ ಒಂದು ಲೀಸ್ ಮಾಡಿಕೊಂಡಿದ್ದಾರೆ. ಮೊದಲನೆಯ 5 ವರ್ಷ, ವರ್ಷಕ್ಕೆ 6 ಲಕ್ಷ 10 ಸಾವಿರ ರೂಪಾಯಿ ಕೊಡಬೇಕು, ಎರಡನೆಯ 5 ವರ್ಷ, ಪ್ರತಿವರ್ಷ 7 ಲಕ್ಷ ರೂಪಾಯಿ ಕೊಡಬೇಕು, ಮೂರನೆ 5 ವರ್ಷ ವರ್ಷಕ್ಕೆ 7.25 ಲಕ್ಷ ರೂಪಾಯಿ ಕೊಡಬೇಕು, ಕೊನೆಯ 5 ವರ್ಷ ವರ್ಷಕ್ಕೆ 8.17 ಲಕ್ಷ ರೂಪಾಯಿ ಕೊಡಬೇಕು.

ಶ್ರೀ ಬಿ. ಜಿ. ಬಣಕಾರ್.—ಎಷ್ಟು ನಷ್ಟವಾಗಿದೆ ?

ಶ್ರೀ ಎ. ಶಂಕರ ಆಳ್ವ.—79 ಲಕ್ಷ 89 ಸಾವಿರ ರೂಪಾಯಿ ನಷ್ಟವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಯಲ್ಲಿ ದುರಾಡಳಿತ ನಡೆದಿದೆ. ಅದಕ್ಕೆ ಸಂಬಂಧಪಟ್ಟವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆಯೆ ? ತೆಗೆದು ಕೊಳ್ಳುವ ಪದ್ಧತಿಯಿದೆಯೆ ?

ಶ್ರೀ ಎ. ಶಂಕರ ಆಳ್ವ.—ನಷ್ಟವಾದ ನಂತರ ಒಂದು ತೀರ್ಮಾನವಾಗಿ ಬಾಡಿಗೆಗೆ ಕೊಡಬೇಕೆಂದು ಗೊತ್ತು ಮಾಡಿತ್ತು. ಇದಕ್ಕೆ ಸರಕಾರ ವಾರ್ಟ ಅಲ್ಲ. ಸಹಕಾರ ತತ್ವದ ಆಧಾರದಮೇಲೆ 20 ವರ್ಷದ ಲೀಸ್ ಮಾಡಿಕೊಂಡಿದ್ದಾರೆ. ಹಣ ವಸೂಲುಮಾಡಿ ಸರಕಾರಕ್ಕೆ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮೊದಲು ಯಾವ ಕಾರಣದಿಂದ ಗಿರಣಿಯನ್ನು ಮುಚ್ಚಲಾಯ್ತು ? ದುರಾಡಳಿತದಿಂದ ಅದಕ್ಕೆ ಅವನತಿಯಾಯ್ತು, ಎಂಬುವುದನ್ನು ಒಪ್ಪುವಿರಾ ? ಹಾಗಾದರೆ ಅವರ ಮೇಲೇನು ಕ್ರಮ ತೆಗದುಕೊಳ್ಳುವಿರಿ ?

ಶ್ರೀ ಎ. ಶಂಕರ ಆಳ್ವ.—ಇದು ನನ್ನತಿಳುವಳಿಕೆಗೆ ಬಂದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮುಂದೆ ಗಮನಕ್ಕೆ ಅದು ಬಂದರೆ ಸೂಕ್ತ ಕ್ರಮ ತೆಗೆದು ಕೊಳ್ಳುವಿರಾ ?

ಶ್ರೀ ಎ. ಶಂಕರ ಆಳ್ವ.—ತೆಗೆದುಕೊಳ್ಳುತ್ತೇವೆ.

ಶ್ರೀ ಆಂದಾನಪ್ಪ.—ಪ್ರತಿ ವರ್ಷ ನಷ್ಟವಾಗಿರುವಾಗ ಲೀಸ್‌ಗೆ ಕೊಡಲು ಕಾರಣ ಏನು ?

ಶ್ರೀ ಎ. ಶಂಕರ ಆಳ್ವ.—ಆ ಕಾರ್ಖಾನೆ ಮುಚ್ಚುವ ಪರಿಸ್ಥಿತಿ ಬಂದು ಅದು ಸರಕಾರದ ಗಮನಕ್ಕೆ ಬಂದನಂತರ ಒಂದು ತೀರ್ಮಾನಮಾಡಿ ಆ ವಿಚಾರವನ್ನು ಬಾಡಿಗೆಗೆ ಕೊಟ್ಟು ಒಂದು ಅಗ್ರಿಮೆಂಟ್ ಮಾಡಿಕೊಳ್ಳಲಾಗಿದೆ. ಆ ಪ್ರಕಾರ ನಡೆಯುತ್ತಿದೆ.

ಶ್ರೀ ಎಡ್. ಡಿ. ದೇವೇಗೌಡ.—ಜಿ. ಮಹದೇವಪ್ಪನವರಿಗೆ ಕೈಮುಟ್ಟಿದೆ. ಅವರು ತಮಗೆ ವಹಿಸಿ ಕೊಡಲು ತಯಾರಿದ್ದರೆ ಮಾಪಸು ಪಡೆಯುವಿರಾ ?

ಶ್ರೀ ಎ. ಶಂಕರ ಆಳ್ವ.—ಕೊಟ್ಟರೆ ತೆಗೆದುಕೊಳ್ಳಲು ತಯಾರಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಹದೇವಪ್ಪನವರು ವಹಿಸಿಕೊಂಡಮೇಲೆ ನಷ್ಟವಾಗಿರುವುದೆಷ್ಟು ?

ಶ್ರೀ ಎ. ಶಂಕರ ಆಳ್ವ.—ಅದು ಪ್ರೈವೇಟ್ ಕಂಪೆನಿ. ಆದುದರಿಂದ ಅದನ್ನು ಹೇಳಲು ಸಾಧ್ಯವಿಲ್ಲ.

ಶ್ರೀ ಬಿ. ಜಿ. ಬಣಕಾರ್.—ಶ್ರೀ ಜಿ. ಮಹಾದೇವಪ್ಪ ಅವರು ಕರಾರು ಪ್ರಕಾರ ನಡೆದು ಕೊಳ್ಳದೇ ಇದ್ದರೆ ಆ ಮಿಲ್ಲನ್ನು ರಿಕ್ವಿಜೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅವರ ಅಗ್ರಿಮೆಂಟನ್ನು ರದ್ದು ಮಾಡುವುದಕ್ಕೆ ಸಾಧ್ಯವೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಲು ರಾ ಮಿನಿಸ್ಟರ್‌ಗೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಬಂದ ನಂತರ ಪರಿಶೀಲನೆ ಮಾಡುತ್ತೇವೆ.

Grant of Huller Licence in Arsikere Taluk

310. **Sri H. S. SIDDAPPA** (Arsikere) :—

Will the Minister of State for Food and Civil Supplies be pleased to state :—

(*a*) whether any applications for grant of Huller licence pertaining to Arsikere Taluk are pending ;

(*b*) if so, the reason for pendency ?

Sri H. N. NANJE GOWDA.— Minister of State for Major Irrigation) [On behalf of SMT. E. E. VAZ.—(Minister of State for Food and Civil Supplies)].—

(*a*) No.

(*b*) Does not arise in view of reply to clause (*a*)

Sri H. S. SIDDAPPA.—You have stated in your reply that no applications for grant of Huller licences are pending. Whether it is not a fact that one application for grant of a licence for Huller in Aggunda village in Arsikere Taluk is pending before the Government ?

ಶ್ರೀ ಎಚ್. ಎನ್. ನಂಜೇಗೌಡ.—ಡೆಪ್ಯೂಟಿ ಕಮೀಷನರವರ ವರದಿ ಮೇರೆ ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್ ಲೈಸನ್ಸ್ ಕೊಡುತ್ತಾರೆ. ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್‌ನಲ್ಲಿ ಪರ್ಮಿಟ್ ಇಷ್ಯೂ ಮಾಡುವುದಕ್ಕೆ ೨ ಆಪ್ಲಿಕೇಷನ್ಸ್ ಪೆಂಡಿಂಗ್‌ನಲ್ಲಿ ಇದೆ.

Sri H. S. SIDDAPPA.—May I bring it to your notice that the Deputy Commissioner recommends for the grant of licence and the Director of Food Supplies issues it. Do you know this procedure, Sir ?

ಶ್ರೀ ಎಚ್. ಎನ್. ನಂಜೇಗೌಡ.—ಡೆಪ್ಯೂಟಿ ಕಮೀಷನರ್‌ರವರ ವರದಿ ಮೇರೆ ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್‌ನವರು ಲೈಸನ್ಸ್ ಇಷ್ಯೂ ಮಾಡುತ್ತಾರೆ. ಆ ರೀತಿ ಡೈರೆಕ್ಟರ್ ಆಫ್ ಫುಡ್ ಸಪ್ಲೈ ಆಫೀಸಿನಲ್ಲಿ ೨ ಅರ್ಜಿಗಳು ಪೆಂಡಿಂಗ್‌ನಲ್ಲಿದೆ.

Sri H. S. SIDDAPPA.—Has it come to the notice of Government that on a wrong report made by the Food Assistant of the Deputy Commissioner, an application for grant of a licence, has been rejected even though the party has paid thousands of rupees as bribe ?